ದೊಡ್ಡಬಳ್ಳಾಪುರ ನಗರ ಮತ್ತು ಗ್ರಾಮಪಂಚಾಯತ್ ಕೇಂದ್ರಗಳಲ್ಲಿ ಗ್ರಂಥಾಲಯಗಳನ್ನು ತೆರೆಯುವುದು.

1819(2412)

ಶ್ರೀ ಕೃಷ್ಣಪ್ಪ ಎ.(ದೊಡ್ಡಬಳ್ಳಾಪುರ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ ಕೇಂದ್ರ ಮಟ್ಟದಲ್ಲಿ ಗ್ರಂಥಾಲಯವನ್ನು ತೆರೆಯುವುದಾಗಿ ಸರ್ಕಾರದ ಆದೇಶವಿದ್ದು ಈವರೆಗೆ ಎಷ್ಟು ಗ್ರಾಮ ಪಂಚಾಯತಿ ಕೇಂದ್ರಗಳಲ್ಲಿ ಗ್ರಂಥಾಲಯ ತೆರೆಯಲಾಗಿದೆ;

ಆ) ದೊಡ್ಡಬಳ್ಳಾಪುರ ನಗರ ಮತ್ತು ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಈವರೆಗೆ ಎಷ್ಟು ಗ್ರಂಥಾಲಯಗಳನ್ನು ತೆರೆಯಲಾಗಿದೆ; ಅವು ಯಾವುವು;

ಇ) 2001-2002ನೇ ಸಾಲಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿಗೆ ಎಷ್ಟು ಗ್ರಂಥಾಲಯಗಳನ್ನು ಸರ್ಕಾರ ಮಂಜೂರು ಮಾಡುವ ಯೋಜನೆ ಇದೆ?

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ 2751 ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ.

ಆ) ದೊಡ್ಡಬಳ್ಳಾಪುರ ನಗರ ಮತ್ತು ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ 10 ಗ್ರಂಥಾಲಯಗಳನ್ನು ತೆರೆಯಲಾಗಿದೆ. ಅವುಗಳ ವಿವರ ಈ ಕೆಳಕಂಡಂತಿವೆ.

1) **ಶಾಖಾ ಗ್ರಂಥಾಲಯ:** ದೊಡ್ಡಬಳ್ಳಾಪುರ

ಗ್ರಾಮ ಪಂಚಾಯಿತಿ ಗ್ರಂಥಾಲಯ:

2) ರಾಜಘಟ್ಟ

3) ಹಣಬೆ

4) ಎಸ್.ಎಸ್.ಘಾಟಿ

5) ಕಾಡನೂರು

6) ತೂಬುಗೆರೆ

7) ಚೆನ್ನದೇವಿ ಅಗ್ರಹಾರ

8) ಮೆಳೆಕೋಟೆ

9) ಅರಳು ಮಲ್ಲಿಗೆ

10) ಹೆಗ್ಗಡೆಹಳ್ಳಿ

ಇ) 2001-02ನೇ ಸಾಲಿನಲ್ಲಿ ತಾಲ್ಲೂಕಿಗೆ ಎರಡರಂತೆ ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಮಂಜೂರು ಮಾಡುವ ಯೋಜನೆ ಇದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಸ್ವಚ್ಛ ಗ್ರಾಮಗಳು.

1820(2414)

ಶ್ರೀ ಎ.ಕೃಷ್ಣಪ್ಪ(ದೊಡ್ಡಬಳ್ಳಾಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಜಿಲ್ಲಾ ಪಂಚಾಯತಿ ಪತಿಯಿಂದ 2000-2001ನೇ ಸಾಲಿನಲ್ಲಿ ತೆಗೆದುಕೊಂಡಿರುವ ಸ್ವಚ್ಛ ಗ್ರಾಮಗಳು ಎಷ್ಟು; ಅವು ಯಾವುವು;

ಆ) ಈ ಸ್ವಚ್ಛ ಗ್ರಾಮಗಳಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಹಣವೆಷ್ಟು;

ಇ) ಈ ತಾಲ್ಲೂಕಿಗೆ 2001-2002ನೇ ಸಾಲಿಗೆ ತೆಗೆದುಕೊಂಡಿರುವ ಸ್ವಚ್ಛ ಗ್ರಾಮಗಳು ಎಷ್ಟು ಅವು ಯಾವುವು; ಇದಕ್ಕೆ ಸರ್ಕಾರ ಒದಗಿಸಿರುವ ಅನುದಾನ ಎಷ್ಟು? (ವಿವರ ನೀಡುವುದು)

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಸ್ವಚ್ಛ ಗ್ರಾಮ ಯೋಜನೆಯಡಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಈ ಕೆಳಕಂಡ 18 ಗ್ರಾಮಗಳನ್ನು ತೆಗೆದುಕೊಳ್ಳಲಾಗಿದೆ.